*ಎಸ್. ಶ್ರೀಧರ್, ಬೆಂಗಳೂರು*
*ಸದಾ ಸಂತೋಷದಿಂದ ಇರಲು ಏನು ಮಾಡಬೇಕು?*



ಗೋಳು ಸೀರಿಯಲ್‌ಗಳಿಂದ ದೂರವಿರಬೇಕು!

*ನ.ಸು. ಆನಂದ್, ಬೆಂಗಳೂರು*
*ವಿಚಾರವಂತನು ಆಚಾರ ಮರೆತರೆ ಮತ್ತು ಆಚಾರವಂತನು ವಿಚಾರ ಮರೆತರೆ ಏನಾಗುತ್ತದೆ?*
ಆಕಾರ ವಿಕಾರವಾಗುತ್ತದೆ; ಸ್ವೀಕಾರ ನಕಾರವಾಗುತ್ತದೆ.

*ಎಚ್. ಆನಂದಕುಮಾರ್, ಚಿತ್ರದುರ್ಗ*
*'ಬದುಕು' ಎಂಬ ಮೂರಕ್ಷರದಲ್ಲಿ ಬಯಕೆಗಳು, ಆಕಾಂಕ್ಷೆಗಳು ಸಾವಿರದಷ್ಟು ಅಲ್ಲವೇ ರಾಮ್?*
'ಕೋಟಿ ಕೋಟಿಯಷ್ಟು' ಎಂದರಂತೆ ಕನ್ನಿಮೋಳಿ.

*ಮಲ್ಲಿಕಾರ್ಜುನ ಹ. ಬಗಲಿ, ಗಿರಗಾಂವ*
*ಅತ್ತಿಗೆಯನ್ನು ಅಮ್ಮ ಎನ್ನುವುದು ಸರಿಯೋ, ಅಕ್ಕ ಎನ್ನುವುದು ಸರಿಯೋ?*
ಕರೆ ಎಂತಾದರೂ ಇರಲಿ, ಭಾವ ಪೂಜ್ಯವಾಗಿದ್ದರೆ ಸರಿ.

*ಕೊಕ್ಕಡ ವೆಂಕಟ್ರಮಣ ಭಟ್, ಮಂಡ್ಯ*
*ಕೆಲವು ಮನೆಗಳಲ್ಲಿ 'ನಾಯಿ ಇದೆ, ಎಚ್ಚರಿಕೆ' ಎಂದು ಬರೆದಿರುತ್ತಾರಲ್ಲಾ, ನಾಯಿಯಲ್ಲದೆ ಬೇರಾರೂ ಅಲ್ಲಿ ಇಲ್ಲವೆ?*




ಇರುತ್ತಾರೆ – ಬಾಲ ಅಲ್ಲಾಡಿಸುವ ಪತಿ, ಬೊಗಳುವ ಸತಿ, ಕಚ್ಚಾಡುವ ಮಕ್ಕಳು! ಅವರಿಗೂ ಇದೇ ಬೋರ್ಡ್!

*ಮೊಳಕಾಲ್ಮೂರು ಸುರೇಶ, ಬಳ್ಳಾರಿ*
*ಅಲ್ರಪ್ಪೋ, ಮಡಿವಂತರ ಒಣಗಳಲ್ಲಿ ಹೊಕ್ಕ ಕೋಳಿ, ಕುರಿಗಳೂ ಮಂಗಮಾಯವಾಗುತ್ತಿವೆಯಲ್ಲಾ?*
ಶಾಪದ ಕಾವಿಗೆ ಸಿಲುಕಿ ಚಿಕನ್, ಮಟನ್ ಕಬಾಬ್‌ಗಳಾಗಿ ಹೋದವೇನೋ...!

*ಕಾಳೀಹುಂಡಿ ಶಿವಕುಮಾರ್, ಮೈಸೂರು*
*ಈ ಸುಂದರ ಸಂಸಾರ ಹಲವರ ಪಾಲಿಗೆ ಅಸ್ಥಿಪಂಜರ; ಏಕೆ?*
ಅವರ ಸಂಪಾದನೆ ಯಾವ ಮೂಳೆಗೂ ಸಾಲುವುದಿಲ್ಲವಾದ್ದರಿಂದ!

*ಎಂ.ಬಿ. ಖೋದಾನಪುರ,ಸವದತ್ತಿ*
*ಪ್ರೇಮಿಸಿ ಮದುವೆಯಾಗುವುದು ಒಳ್ಳೆಯದೋ, ಮದುವೆಯಾಗಿ ಪ್ರೇಮಿಸುವುದು ಒಳ್ಳೆಯದೋ?*
ಪ್ರೇಮ ಸ್ವಚ್ಛಂದ, ಮದುವೆ ಬಂಧ; ಬೇಡಿ ಬೇಡಿ ಬೇಡಿ ಹಾಕಿಸಿಕೊಳ್ಳುವ ಯತ್ನವೇಕೆ?

*ಎಂ.ಎಸ್.ಸೋಮಶೇಖರ್, ಮೈಸೂರು*
*ಸಾಧನೆಗೆ ನಿಷ್ಠೆ ಮುಖ್ಯವೋ, ಅದೃಷ್ಟ ಮುಖ್ಯವೋ?*
ಆ ಅದೃಷ್ಟಕ್ಕೇ ಸಾಧಕನೊಡನೆ ಇರುವ ನಿಷ್ಠೆ ಇರಬೇಕು!

*ಎಂ.ಜಿ.ಶಿವರಾಂ, ಬೆಂಗಳೂರು*
*ಓಟು ನೋಟಿನೊಳಗೊ, ನೋಟು ಓಟಿನೊಳಗೊ, ಓಟುನೋಟುಗಳೆರಡೂ ನಿನ್ನೊಳಗೊ ಮತದಾರನೆ?*
ನೋಟು ಕೊಟ್ಟವರ, ಲೋಟವಿತ್ತವರ ನಾಗಾಲೋಟದ ಮಾಟದ ಕಾಟದ ಹರಕೆಯ ಕುರಿ ನಾನು ಶಿವನೇ!

*ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು*
*ಮದುವೆಗಳು ನಿಜವಾಗಿಯೂ ಗಂಡಸನ್ನು ಹತೋಟಿಗೆ ತರುತ್ತವೆಯೇ?*
ಹಾಗೆನ್ನುತ್ತಲೇ ಹಲವಾರು ಹೆಣ್ಣುಗಳನ್ನು ಪ್ರಯೋಗ–ಪಶುಗಳಾಗಿ ಬಳಸುವುದು ನಮ್ಮ ಸತ್ಸಂಪ್ರದಾಯ.

*ರಾಜಶೇಖರ ಹಾದಿಮನಿ, ಧಾರವಾಡ*
*ತ್ರೇತಾಯುಗದಲ್ಲಿ ಹಿರಿಯಣ್ಣ ತಂದೆಗೆ ಸಮಾನ ಎನ್ನುತ್ತಿದ್ದರು; ಈಗ ಹೇಗೆ?*
ಈಗ 'brothers' ಕಾಲಕ್ರಮೇಣ 'bothers' ಆಗಿ, ನಂತರ 'others' ಆಗುವುದೇ ಹೆಚ್ಚು!

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ಕಾಲಕ್ಕೂ, ಹಣೆಬರಹಕ್ಕೂ ಏನು ವ್ಯತ್ಯಾಸ?*
ಕಾಲ ಕೂಡಿಬಂದರೆ ಲಗ್ನ; ನಂತರದ್ದೆಲ್ಲಾ ಹಣೆಬರಹ!

*ಗಾಯತ್ರಿ, ರಾಜಾಜಿನಗರ*
*ಅರ್ಹರಿಗೆ ಸಲ್ಲಬೇಕಾದ ಪ್ರಶಸ್ತಿ ಅನರ್ಹರಿಗೆ ಸಲ್ಲಿಸಲ್ಪಟ್ಟರೆ...?*
ಅದನ್ನು ರಾಜ್ಯಪ್ರಶಸ್ತಿ ಎಂದು ಪರಿಗಣಿಸಲಾಗುತ್ತದೆ!

## ಬಹುಮಾನಿತ ಪ್ರಶ್ನೆ

*ಸರಸ್ವತಿ ಮೂರ್ತಿ, ಬೆಂಗಳೂರು*
*ತ್ರೇತಾಯುಗದಲ್ಲಿ ಮಂಥರೆ, ದ್ವಾಪರದಲ್ಲಿ ಶಕುನಿ, ಕಲಿಯುಗದಲ್ಲಿ?*
ಪ್ರತಿ **month**ಗೊಂದು ಮಂಥರೆ, ಸೆಷನ್‌ಗೊಬ್ಬ ಶಕುನಿ!

*ಆರ್. ಬಾಲರಾಜ್, ಯಲಹಂಕ*
*ಇಂದಿನ ಯುವಪೀಳಿಗೆಯಲ್ಲಿ ನಮ್ಮ ರಾಷ್ಟ್ರಪಿತನ ಸ್ಮರಣೆ ಕ್ಷೀಣಿಸುತ್ತಿದೆಯಲ್ಲಾ...?*
ಅಯ್ಯೋ ಬಿಡಿ; ಸ್ವಂತ ಪಿತನನ್ನೇ ಹಣ ಬೇಕೆಂದಾಗ ಮಾತ್ರ ಸ್ಮರಿಸುವ ಇವರಿಗೆ ರಾಷ್ಟ್ರಪಿತ ತಿಳಿದೂ ಇರುವುದಿಲ್ಲ!

*ಕಂಡಕ್ಟರ್ ರಾಜು, ಗುಬ್ಬಿ*
*ಎರಡನೆಯ ಮದುವೆಯಲ್ಲೂ ಗಂಡಸು ಹೊಸತನ್ನೇ ಬಯಸುತ್ತಾನಲ್ಲಾ...?*
ಒಪ್ಪಬೇಕಾದ್ದೇ – ಹೆಣ್ಣು ಹಳೆಯದಾದರೂ ಕೋಲು, ಪಾದರಕ್ಷೆ, ಛತ್ರಿ, ಸೂಟುಗಳು ಹೊಸದಾಗಿರಬೇಕಲ್ಲವೇ...!

*ಮನೋರಮಾ ಪ್ರಭು, ಹೊನ್ನಾವರ*
*ಆತ್ಮಹತ್ಯೆ ಮಹಾಪಾಪ ಎನ್ನುತ್ತಾರೆ, ಏಕೆ?*
ಯಮನ ಏಜೆಂಟ್ ಆದ ವೈದ್ಯನನ್ನು ತಪ್ಪಿಸಿ ನೇರವಾಗಿ ಯಮನ ಬಳಿ ಹೋಗುವುದು ತಪ್ಪಲ್ಲವೇ...!

*ಎನ್. ಗೋಪಾಲರಾವ್, ಹೊಸಕೆರೆಹಳ್ಳಿ*
*ಇತ್ತೀಚೆಗೆ ನಾಲ್ವರು ತಮಿಳರು ಸೇರಿ ಒಂದೇ ಪತ್ರಿಕೆ ಓದುತ್ತಿದ್ದುದನ್ನು ಕಂಡೆ; ಇದು ಏನನ್ನು ಸೂಚಿಸುತ್ತದೆ?*
ಕನ್ನಡಿಗರ ಸಹವಾಸದಿಂದ ದುರಭಿಮಾನಿಗಳೂ ನಿರಭಿಮಾನಿಗಳಾಗುತ್ತಾರೆಂದು!

*ಬಿಂಡಿಗನವಿಲೆ ರಂಗರಾಜು, ಬೆಂಗಳೂರು*
*ರಾಮ್‌ಜೀ, ಬಕ್ಕತಲೆಯವರಿಗೆ ಬುದ್ಧಿ ಜಾಸ್ತಿಯಂತೆ, ನಿಮ್ಮದು?*



ಬರೀ ಸುಳ್ಳು; ಉತ್ತರ ಹೊಳೆಯದೆ ಕೂದಲು ಕಿತ್ತುಕೊಂಡದ್ದರಿಂದ ತಲೆ ಬೋಳಾಗಿರುತ್ತದಷ್ಟೆ!

ರಾಮ್